ತಾರೀಖು 17ನೇ ಜೂನ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತಿಪಟೂರು ಸಬ್ ರಿಜಿಸ್ಟ್ರೀ ಆಫೀಸ್‌ನಲ್ಲಿ ಬೇವಾರಸಾಗಿಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾದ ಅಧಿಕಾರ ಹೊಂದಿದ ಮುತ್ತಾಲೀಕ ಯಾ ಪಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳ ವಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳದೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಯನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ದಸ್ತಾವೇಜು ನಂಬರ್	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟರ್ ಮಾಡಿದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ಸಾಸ್ಥಳ	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು
60 1882—83	1—6—82	5—6—82	5—6—82	ಲಿಂಗದಹಳ್ಳಿ ಮೇಲಣಾರು ನೆ ಲಿಂಗಂಣ.	ಹೊನ್ನವಳ್ಳಿ ತಾಲ್ಲೂಕು ಗುರುಗದಹಳ್ಳಿ ವಾಲ್ಲಪಟ್ಟ.	45 ರೂಪಾಯಿಗೆ ಲಿಂಗದಹಳ್ಳಿಗಾ ಮದಲ್ಲಿ ಇರುವ ಸರ್ವೆ 49ನೇ ನಂಬರ್ ಬಾಗಾಯತು ಜಮೀನು ಪೈಕೀ ತನ್ನ ಹಿಸ್ಸೆ ಬಾಬತು ಜಮೀನು ಕ್ರಯಕ್ಕೆ ಕೊಟ್ಟರುವದಾಗಿ ವಗೈರೆ.

ಪಿ. ಎಸ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಅರಮನೆ ಇಲಾಖಾ ಅಸಿಸ್ಟೆಂಟ್ ಕಮಿಷನರವರ ಆಫಿಸಿನಿಂದ.

ತಾರೀಖು 25ನೇ ಜೂನ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಲವು ಪ್ರೈವೇಟ್ ಜನಗಳ ಸಾಲಗಳನ್ನು ನಿವರ್ತಿ ಮಾಡುವದಕ್ಕೋಸ್ಕರ ಈ ಕೆಳಗೆ ನಮೂದು ಮಾಡುವ ಜವಾಹಿರು ವಗೈರೆ ವಜವೆಗಳನ್ನು ಸ್ಯ ಮಜಕೂರು ಜುಲೈ ತಾರೀಖು 15ನೇ ಮಂಗಳವಾರ ದಿವಿ 12 ಘಂಟೆ ಲಾಗಾಯಿತು ಅದರ ಮುಂದಣ ದಿನಗಳಲ್ಲೂ ಸಹಾ ಮೈಸೂರು ಅರಮನೆ ಖಜಾನೆ ಬಳಿ ಹರಾಜ್ ಮಾಡಿಸುವದರಿಂದ ಇಚ್ಛೈಯುಳ್ಳ ಜನಗಳು ಬಂದು ಚಡ ದರಖಾಸ್ತಿನಲ್ಲಿ ತಕ್ಷಣ ಪದು ಗವಜನ್ನ ಹಾಜರ್ಮಾಡತಕ್ಕದ್ದೆಂತ ನಿಬಂಧನೆ ಮಾಡಿರುತ್ತೆ.

ಜಾ॥ ನಂ.	ಪಟ್ಟ ನಂ.	ನಗದ ಹೆಸರು.	ಪಟ್ಟೇಮೇರೆ ಅಂದಾಜ್ ರೂಪಾಯಿ.
1	4	ಕೆಂಪಿನ ಅಡ್ಡಬಿಲ್ಲೆ 1ಕ್ಕೆ	300
2	6	ಡಿಟೋ ಚೌಕಟ್ಟು 1ಕ್ಕೆ	300
3	11	ಮಲಕಿನ ಅಡ್ಡಿಕೆ	300
4	32	ಮುಖರಾ 1ಕ್ಕೆ	800
5	203	ಪಜ್ಜದ ಜಡೆಕುಚ್ಚು 3ಕ್ಕೆ	250
6	209	ಯೇಕಾವಳಿ ಸರ 1ಕ್ಕೆ	275
7	221	ಚಿನ್ನದ ಡಾಬು 1ಕ್ಕೆ	1,080
8	234	ಚಿನ್ನದ ವೀಳ್ಯ ಡಬ್ಬಿ	500
9	235	ಚಿನ್ನದ ವೀಳ್ಯ ಸಂಚಿಕೆ	1,850
10	237	ಚಿನ್ನದ ಕುಜಾಯಿ 1ಕ್ಕೆ	2,130
11	239	ಚಿನ್ನದ ಚಂಬಾ 1ಕ್ಕೆ	115
12	242	ಹವಳದ ಚಂಡು 1ಕ್ಕೆ	10

ಜಾ॥ ನಂ.	ಪಟ್ಟಿ ನಂ.	ನಗದ ಹೆಸರು.	ಪಟ್ಟೀ ಮೇರೆ ಅಂದಾಜ್ ರೂ.
13	243	ಚಿನ್ನದ ಚಂಬು 1ಕ್ಕೆ	2,740
14	276	ಚಿನ್ನದ ಪಾದಬಟ್ಟಲು 6ಕ್ಕೆ	940
15	277	ಚಿನ್ನದ ಪಂಚಪಾತ್ರೆ 1ಕ್ಕೆ	185
16	278	ಚಿನ್ನದ ಕಾಲುಂಗರ ಫರದು 2ಕ್ಕೆ	520
17	280	ಚಿನ್ನದ ಲಾಹಿರಿ ಬಳೆ 8ಕ್ಕೆ	166
18	294	ಚಿನ್ನದ ತಟ್ಟೆ 1ಕ್ಕೆ	560
19	296	ಚಿನ್ನದ ಗುಂಡುಬಟ್ಟಲು 4ಕ್ಕೆ	1,410
20	297	ಚಿನ್ನದ ಸ್ಥಾಲಿ 1ಕ್ಕೆ	385
21	298	ಚಿನ್ನದ ಕಾಳಂಬಿ 1ಕ್ಕೆ	335
22	303	ಚಿನ್ನದ ದ್ವಿಮುಖಿ 1ಕ್ಕೆ	1,536
23	388	ವಲಂದಾಕಮಲದ ಬೆಂಡವಾಲೆ ಜೋಡಿ 1ಕ್ಕೆ	500
24	396	ವಜ್ರದ ಚೌಕಿ ವುಂಗುರ 1ಕ್ಕೆ	50
25	423	ವಜ್ರದ ಹಣಿಬಟ್ಟು 1ಕ್ಕೆ	250
26	439	ಜವಾಹಿರು ಹುವ್ವು	200
27	455	ವಜ್ರದ ಮೂಗಬಟ್ಟು 1ಕ್ಕೆ	40
28	240	ಚಿನ್ನದ ಪಾಸಾಲೆ 1ಕ್ಕೆ	2,400
29	534	ಚಿನ್ನದ ಬಂದೀತಾಳಿ 1ಕ್ಕೆ	120
30	286	ಯೀಕಾವಳಿ ಸರ 1ಕ್ಕೆ	300
31	460	ಭೂಷಿಂಗ	150
32	496	ಮುತ್ತಿನ ದಂಡೆ	20
33	497	ಚಿನ್ನದ ಮಹನ್ಮೋಮಿ ಕೋಲು 1ಕ್ಕೆ	600
34	558	ಬೆಳ್ಳಿ ಮಸ್ತುಕದ ಕಂಬಿ 4ಕ್ಕೆ	250
35	503	ಚಿನ್ನದ ಘಂಟೆ ಹಾಕಿದ ಜೀರೆ 1ಕ್ಕೆ	2,100
36	506	ಜಮಖಿ ಕೆಲಸದ ಪೀತಾಂಬರ 1ಕ್ಕೆ	300
37	480	ಚಿನ್ನದ ಗೊಂಬೆ ನಗ 24ಕ್ಕೆ	520
38	465	ಮಲಕು ವಗೈರೆ ಗೊಂಬೆ ನಗ 4ಕ್ಕೆ	100
39	0	ಜವಾಹಿರು ಪಾದಸರ ಜೋಡಿ 1ಕ್ಕೆ	3,850
			28,437
40	15	ಕೆಂಪಿನ ಮುಂಗುರುಳು ಪಟ್ಟಿ	600
41	50	ವಜ್ರದ ಕಂಣುಸೋಗೆ ಜೋಡಿ 1ಕ್ಕೆ	100
42	58	ವಜ್ರದ ಪಂನೆ ಜೋಡಿ 1ಕ್ಕೆ	300
43	62	ವಜ್ರೆಟುಗಡಿ ಜೋಡಿ 1ಕ್ಕೆ	100
44	79	ಕೆಂಪಿನ ಹೊನ್ನುವ್ವು ಜೋಡಿ 1ಕ್ಕೆ	400
45	9	ವಜ್ರದ ಜೊಟನಗಗಳು	2,500
46	89	ವಜ್ರದ ಬೆಂಡವಾಲೆ ಜೋಡಿ 1ಕ್ಕೆ	1,000
47	91	ಪಚ್ಚೆ ವಜ್ರದ ಕರ್ನಫೂಲ್ ಜೋಡಿ 1ಕ್ಕೆ	600
48	139	ವಜ್ರದ ತೊಟ್ಟಬಳೆ ಜೋಡಿ 1ಕ್ಕೆ ಕೆಂಪು ಸಹಾ	11,700
49	144	ವಜ್ರ ಮುತ್ತಿನ ಕಂಕಣ ಜೋಡಿ 1ಕ್ಕೆ	1,500
50	353	ಚಿನ್ನದ ಕಾಲಕಪ್ಪ ಗೆಜ್ಜೆ ಜೋಡಿ 1ಕ್ಕೆ	154
51	445	ವಜ್ರದ ಅಕ್ಕಿಪಿಲ್ಲಿ ಜೋಡಿ 1ಕ್ಕೆ	550

ಜಿ|| ನಂ.	ಪಟ್ಟಿ ನಂ.	ನಗದ ಹೆಸರು.	ಪಟ್ಟೀ ಮೇರೆ ಅಂದಾಜ್ ರೂ.
52	476	ವಂಟಿ ಕೆಂಪಿನ ವುಂಗುರ 1ಕ್ಕೆ	20
53	486	ಡಿಟೋ ವುಂಗ) 1ಕ್ಕೆ	10
54	511	ಕೆಂಪಿನ ಅಡ್ಡಿಕೆ 1ಕ್ಕೆ	560
55	357	ಚಿನ್ನದ ಕಾಲಂದಿಗೆ ಜೋಡಿ 1ಕ್ಕೆ	22
56	530	ತನಬೀರು ವುಂಗುರ 1ಕ್ಕೆ	15
57	554	ಗೊಂಬೆಜಂದವಮಾವು	75
58	555	ಕೆಂಪುಪಚ್ಚೆ ಅರ್ಧ ಚಂದ)	100
59	527	ಪಚ್ಚೆ ವುಂಗುರ 1ಕ್ಕೆ	10
60	117	ಕೆಂಪಿನ ಮಕರಕಂಠಿ 1ಕ್ಕೆ	4,000
			24,316
61	57	ಕೆಂಪಿನ ಪನ್ನೆ ಜೋಡಿ 1ಕ್ಕೆ	250
62	92	ಕೆಂಪಿನ ಬೆಂಡವಾಲೆ ಜೋಡಿ 1ಕ್ಕೆ	470
63	148	ವಜ್ರದ ಕಂಕಣಿ ಜೋಡಿ 1ಕ್ಕೆ	2,500
64	27	ಮುತ್ತಿನ ಕುಚ್ಚು 1ಕ್ಕೆ	750
65	134	ವಜ್ರದ ಬಳೆ 2ಕ್ಕೆ	1,000
66	433	ವಜ್ರದ ಹಾತ ಪಾಂಚಿ ಜೋಡಿ 1ಕ್ಕೆ	450
67	434	ಡಿಟೋ ಬಾಜೂಬಂದು 1ಕ್ಕೆ	800
68	179	ಜುಂಜಪಟ್ಟಿ 1ಕ್ಕೆ	600
69	35	ಮುತ್ತಿನ ಮೂಗುತಿ 2ಕ್ಕೆ	500
			7,320
		ಗ್ರಾಂಡ್ ಟೋಟಲ್ ..	60,073

ಇ. ಸಿ. ಚಿದಂಬರಂ ಐಯ್ಯರ್,
ಪ್ಯಾಲೆಸ್ ಅ|| ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 27ನೇ ಜೂನ್ 1884.

ಷಿಕಾರಿಪುರದಲ್ಲಿ ಹೊಸ ತಾಲ್ಲೂಕು ಕಛ್ಚೇರಿ ಕಟ್ಟಣವನ್ನು ಕಟ್ಟುವದಕ್ಕೆ ಮೈಸೂರು ಗವರ್ಮೆಂಟಿನಿಂದ ಮಂಜೂರಾಗಿರುತ್ತೇಯಾಗಿ ಸದರೀ ಕೆಲಸವನ್ನು ನೆರವೇರಿಸುವದಕ್ಕೆ ಇದರಿಂದ ದರಖಾಸ್ತು ಅಪೇಕ್ಷಿಸಲ್ಪಡುತ್ತೆ.

1. ತಾಲ್ಲೂಕು ಕಛ್ಚೇರಿಗೆ ಗೊತ್ತಾದ ನಮೂನೇ ಪ್ರಕಾರ ಕಟ್ಟಣವು ಕಟ್ಟಿಸಲ್ಪಡತಕ್ಕದ್ದು. ಮತ್ತು ಪುಮಾರ್ 15,000 ರೂ ಪಾಯಿಗಳು ಲಾಗವಡು ಹಿಡಿಯತಕ್ಕದ್ದು.

2. ಪ್ರತಿ ದರಖಾಸ್ತಿನ ಸಂಗಡಲೂ 500 ರೂಪಾಯಿಗಳು ನಗದಾಗಿಯಾಗಲಿ ಅಥವಾ ಕರೆನ್ಸಿ ನೋಟಿನ ಮೂಲಕವಾಗಿಯಾಗಲಿ ಮುಂಗಡ ತರೀಕ ಡಿಪಾಜಿಟ್ ಕಟ್ಟತಕ್ಕದ್ದು.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಜಾಮೀನೀ ಹಾಜರ್ಮಾಡುವದಕ್ಕೂ ಮತ್ತು ಅವನ ದರಖಾಸ್ತು ಅಂಗೀಕರಿಸಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ಹದಿನೈದು ದಿನಗಳೊಳಗಾಗಿ ಕಂಟ್ರಾಕ್ಟು ಮುಚ್ಚಲಿಕೆಯನ್ನು ಬರೆದುಕೊಡುವದಕ್ಕೂ ಅಪೇಕ್ಷಿಸಲ್ಪಡುವನು;